ಡಿ.<u>ಡಬ್ಲ್ಯೂ-1</u>

<u>ದಿನಾಂಕಃ **27-07-2024** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ಪಾಟೀ ಸವಾಲು ಶ್ರೀ ಬಿ.ಕೆ.ವಿ. ವಕೀಲರಿಂದಃ-</u>

ನಾನು ಎಸ್.ಎಸ್.ಎಲ್.ಸಿ. ವರೆಗೆ ಓದಿರುತ್ತೇನೆ. ನಾನು ಟ್ರೇನ್ ನಲ್ಲಿ ಇಡ್ಲಿ ವ್ಯಾಪಾರ ಮಾಡುತ್ತೇನೆ. ನಾನು ಬಸವೇಶ್ವರ ನಗರದ **4** ನೇ ಕ್ರಾಸ್ ನಲ್ಲಿರುವ ಮನೆಯಲ್ಲಿ ವಾಸವಿದ್ದೇನೆ. ನಿಪಿ**-1** ನನಗೆ ಸೇರಿದ್ದು ಮತ್ತು ಅದರಲ್ಲಿರುವ ಸಹಿ ನನ್ನದು ಎಂದರೆ ಸರಿ. ನಾನು ಚಿಕ್ಕವನಿದ್ದಾಗಿನಿಂದ ಪಿರ್ಯಾದಿಯ ಪರಿಚಯ ಇರುತ್ತದೆ.

ನನ್ನ ಮೇಲೆ ಇದೇ ನ್ಯಾಯಾಲಯದಲ್ಲಿ ಗುರುಪ್ರಸಾದ್ ಎನ್ನುವವರು ಸಿ.ಸಿ.**459/19** ರ ಚೆಕ್ ಕೇಸು ಹಾಕಿರುತ್ತಾರೆ ಎಂದರೆ ಸರಿಯಲ್ಲ. ಪ್ರಕಾಶ್ ಎನ್ನುವವರು ಸಿ.ಸಿ.**566/17** ನ್ನು ನನ್ನ ಮೇಲೆ ಹಾಕಿದ್ದರು ಎಂದರೆ ಸರಿ. ಅದರಲ್ಲಿ **30** ಸಾವಿರ ರೂ.ಗಳಿಗೆ ರಾಜಿ ಮಾಡಿಕೊಂಡಿರುತ್ತೇನೆ. ಜಗದೀಶ್ ಎನ್ನುವವರು ಸಿ.ಸಿ.**680/21** ನ್ನು ನನ್ನ ಮೇಲೆ ಹಾಕಿದ್ದರು ಎಂದರೆ ಸರಿಯಲ್ಲ. ಈ ಪ್ರಕರಣದ ದಾಖಲಾದ ನಂತರ ಪಿರ್ಯಾದುದಾರರು ಹಣದ ಭದ್ರತೆಗಾಗಿ ನಾನು ಚೆಕ್ ಕೊಟ್ಟಿದ್ದು ಅದನ್ನು ದುರುಪಯೋಗಪಡಿಸಿಕೊಂಡು ಈ ಕೇಸನ್ನು ಹಾಕಿರುತ್ತಾರೆಂದು ಅವರ ವಿರುದ್ಧ ಎಲ್ಲಿಯೂ ಪಿರ್ಯಾದು ಸಲ್ಲಿಸಿಲ್ಲ. ಚೆಕ್ ಬೌನ್ಸ್ ಆದ ನಂತರ ಅಂದರೆ ದಿಃ**28-07-2017** ರ ನಂತರ ಇಲ್ಲಿಯವರೆಗೂ ಆ ಬಗ್ಗೆ ಪಿರ್ಯಾದುದಾರರಿಗೆ

ನೋಟೀಸು ಕೊಟ್ಟಿಲ್ಲ ಎಂದರೆ ಸಾಕ್ಷಿ ನಾನು ಆ ದಿನಾಂಕ ಹಾಕಿ ಚೆಕ್ ನ್ನು ಪಿರ್ಯಾದುದಾರರಿಗೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನನಗೆ ಪಿರ್ಯಾದುದಾರರು ಕೊಟ್ಟ ನೋಟೀಸು ತಲುಪಿರುತ್ತದೆ ಆದರೆ ಅದಕ್ಕೆ ನಾನು ಉತ್ತರ ಕೊಟ್ಟಿಲ್ಲ. ಆಗ ನಾನು ಟ್ರೇನ್ ನಿಂದ ಬಿದ್ದು ತಲೆಗೆ ಪೆಟ್ಟಾಗಿದ್ದರಿಂದ ಹಾಸನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಕಾರಣ ಆ ನೋಟೀಸಿಗೆ ಉತ್ತರ ಕೊಡಲು ಆಗಲಿಲ್ಲ.

ನಾನು ಚೆಕ್ ಪುಸ್ತಕ ಮತ್ತು ಅದರ ಕೌಂಟರ್ ಫೈಲ್ ನ್ನು ಹಾಜರುಪಡಿಸುತ್ತೇನೆ. ಆದರೆ ಕೌಂಟರ್ ಫೈಲ್ ನಲ್ಲಿ ಯಾರು ಯಾರಿಗೆ ಯಾವ ದಿನಾಂಕದಂದು ಚೆಕ್ ಕೊಟ್ಟ ಬಗ್ಗೆ ನಮೂದಿಸಿರುವುದಿಲ್ಲ. ಮೇಲೆ ಹೇಳಿದ ಜನರಿಗೆ ಫೆಡರಲ್ ಬ್ಯಾಂಕ್, ಕಾರ್ಪೋರೇಶನ್ ಬ್ಯಾಂಕ್ ಗೆ ಸಂಬಂಧಪಟ್ಟ ಚೆಕ್ ಗಳನ್ನು ಕೊಟ್ಟಿದ್ದೆ. ನಾನು ಎರಡೂ ಬ್ಯಾಂಕ್ ಗಳಿಗೆ ಸಂಬಂಧಿಸಿದ ನನ್ನ ಬ್ಯಾಂಕ್ ಖಾತಾ ಸ್ಟೇಟ್ ಮೆಂಟ್ ನ್ನು ಹಾಜರುಪಡಿಸಲು ತೊಂದರೆ ಇಲ್ಲ. ನಾನು ಈ ಎರಡೂ ಬ್ಯಾಂಕ್ ಗಳಲ್ಲಿ ಒಡವೆ ಮೇಲೆ ಸಾಲ ಪಡೆದಿಲ್ಲ. ಮಣಿಪ್ಪುರಂ ಫೈನಾನ್ಸ್ ನಲ್ಲಿ ಒಡವೆ ಸಾಲ ಪಡೆದುಕೊಂಡಿರುತ್ತೇನೆ. ಸುಮಾರು **7** ವರ್ಷಗಳಿಂದ ಬಂಗಾರದ ಒಡವೆಗಳನ್ನು ಇಟ್ಟು ಸಾಲ ಪಡೆದಿದ್ದು ತೀರಿಸುತ್ತಾ ಬಂದಿರುತ್ತೇನೆ. ಆ ಬಗ್ಗೆ ಮಣಿಪ್ಪುರಂ ಫೈನಾನ್ಸ್ ನ ದಾಖಲೆಗಳನ್ನು ಹಾಜರುಪಡಿಸಬಲ್ಲೆ.

ನನಗೆ ಈ ಪ್ರಕರಣದಲ್ಲಿ ಜಾಮೀನು ಪಡೆದ ನಂತರ ನಿಡಿ-**5** ಕ್ಕೆ ಸಂಬಂಧಿಸಿದಂತೆ ಎಲ್ಲಿಯೂ ಪಿರ್ಯಾದುದಾರರ ಮೇಲೆ ದೂರು ಸಲ್ಲಿಸಿರುವುದಿಲ್ಲ. ನಿಡಿ-**5** ರ ನೋಟರಿ ಮಾಡಿದಂತಹ ಶ್ರೀ ನಂದೀಶ್ ರವ ರನ್ನು ನನ್ನ ಪರವಾಗಿ ಸಾಕ್ಷಿ ವಿಚಾರಣೆ ಮಾಡಿಸಲು ನನಗೆ ತೊಂದರೆ ಇಲ್ಲ. ನನಗೆ ವ್ಯವಹಾರ ಜ್ಞಾನ ಇದೆ ಎಂದರೆ ಸರಿ. ನಿಡಿ-**5** ರಲ್ಲಿ ಶ್ರೀ ನಂದೀಶ್ ವಕೀಲರ ಸಹಿ ಇಲ್ಲ ಎಂದರೆ ಸರಿ. ಅದೇ ರೀತಿ ಸಾಕ್ಷಿದಾರರ ಪೂರ್ತಿ ವಿವರಣೆ ಇಲ್ಲ ಎಂದರೆ ಸರಿ. ಯಾವುದೇ ನೋಟರಿ ದಾಖಲೆಯನ್ನು ನೋಟರಿ ಮಾಡಿದರೆ ಲೆಡ್ಜರ್ ಬುಕ್ ನಲ್ಲಿ ಆ ಬಗ್ಗೆ ನಮೂದಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-**5** ರಲ್ಲಿರುವ ಸಹಿಗಳು ಪಿರ್ಯಾದಿದಾರರ ಮತ್ತು ಅವರ ಗಂಡ ಶಿವಕುಮಾರ್ ರವರ ಸಹಿಗಳು ಅಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರರ ಸಾಕ್ಷ್ಯ ವಿಚಾರಣೆ ಆದ ನಂತರ ನಿಡಿ-**5** ನ್ನು ಸೃಷ್ಟಿಸಿಕೊಂಡು ಹಾಜರುಮಾಡಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ನಿಡಿ-**5** ರಂತೆ ಕರಾರು ಆಗಿದ್ದರೆ ನಾನು ಪಿರ್ಯಾದುದಾರರು

ಕಳುಹಿಸಿದ ನೋಟೀಸಿಗೆ ಉತ್ತರ ಕೊಟ್ಟು ಅದರಲ್ಲಿ ಆ ದಾಖಲೆಯ ಬಗ್ಗೆ ಹೇಳುತ್ತಿದ್ದೆ ಎಂದರೆ ನಾನು ನೋಟೀಸಿಗೆ ಉತ್ತರ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ದಿ:**26-06-2017** ರಂದು ನನಗೆ ಕೈಗಡ ಹಣ ಎಂದು **2,80,000/-** ರೂ. ಕೊಟ್ಟಿದ್ದು ನಾನು ಅದರ ತೀರುವಳಿಗಾಗಿ ನಿಪಿ-**1** ರ ಚೆಕ್ ನ್ನು ಕೊಟ್ಟಿದ್ದು ಅದು ಬೌನ್ಸ್ ಆಗಿರುತ್ತದೆ ಎಂದರೆ ಸರಿಯಲ್ಲ. ಈ ರೀತಿ ನಾನು ಹಲವರ ಬಳಿ ಹಣ ಪಡೆದು ಅದರ ಬದಲಾಗಿ ಚೆಕ್ ಗಳನ್ನು ಕೊಟ್ಟು ಕೇಸುಗಳು ಆದ ನಂತರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈಗ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-**5** ಪಿರ್ಯಾದುದಾರರಿಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. **27-07-2024.**